ಇನಾಮು ಜಮೀನು ಕೈತಪ್ಪಿಹೋಗಿ ಸುಮಾರು ಕಾಲವಾಯ್ತು. ಆಮೇಲೆ ಗೇಣಿಗೆ ಕೊಟ್ಟದ್ದು ಹೋಯ್ತು. ಆಗಾಗ ಸಾಲಮಾಡಿ ತೀರಿಸಿದ್ದು, ಬೇಸಾಯದ ಸಹಜ ಖರ್ಚು, ನವರಾತ್ರಿ ಮುಂತಾದ ಹಬ್ಬಗಳು, ಬಂದು ಹೋಗುವವರು ಅಂತ ಅಂತಸ್ತಿಗೆ ತಕ್ಕಂತೆ ಖರ್ಚು ಮಾಡಲೇಬೇಕಾದ್ದು ತನಗೆ ಆನಂದಗೆ ಗೊತ್ತು. ನವರಾತ್ರಿಯಲ್ಲೆ ಒಂಬತ್ತು ದಿನ ಪೂಜೆ, ಅಷ್ಟು ಜನರಿಗೆ ವಿಶೇಷ ಊಟ ಅಂತ ಅರ್ಧ ಲಕ್ಷ ಬೇಕು. ಇವರಿಗೆ ಅಂದಾಜು ಹತ್ತೋದಿಲ್ಲ! ಹತ್ತುವರ್ಷ ಹಿಂದೆ, ತಂಪಿರುವ ಗುಡ್ಡಾಪುರ ಕೆರೆ ಹತ್ತಿರದ ಐದೆಕರೆಯಲ್ಲಿ ಅಡಕೆ ಹಾಕಿದ್ದಕ್ಕೆ ಸ್ವಲ್ಪ ಉಸಿರಾಡಿಸೊ ಬಲ ಬಂದಿದೆ. ಆನಂದ ಕೃಷಿಯಲ್ಲಿ ಎಮ್ಮೆಸ್ಸಿ ಮಾಡಿದವ ಇಲ್ಲೆ ನಿಂತು ಗದ್ದೆ ತೋಟ ಮುತುವರ್ಜಿಯಿಂದ ನೋಡಿಕೊಳ್ತಿದಾನೆ ಅಂತ ತಮ್ಮದೂ ಒಂದು ಅಂತಸ್ತು. ಇಲ್ಲವಾದರೆ ಎಂಬತ್ತೈದರ ತಾನು ಯಾವ ಲೆಕ್ಕಕ್ಕೂ ಇಲ್ಲ. ಎಷ್ಟು ಆಸ್ತಿಯಿದ್ರು ನೋಡಿಕೊಳ್ಳೋರಿಲ್ಲದಿದ್ರೆ ಕೆಲಸ ಆಗೋದಿಲ್ಲ. ಮೇಲಿಂದ ಕೂಲಿಗೆ ಕೊಡುವುದೇನು ಸ್ವಲ್ಪವಾ? ಮೇಲ್ವಿಚಾರಣೆಯಿಲ್ಲದಿದ್ರೆ ಕೂಲಿಯೂ ದಂಡವೆ...

ಅಂಗಳದಲ್ಲಿ ತೆಂಗಿನ ಹೆಡೆ ಬಿದ್ದ ಸದ್ದಾಯ್ತು. ಆತಂಕದಿಂದ ಆನಂದನತ್ತ ನೋಡಿದರು. 'ಲಿಂಗಪ್ಪನಿಗೆ ನಿನ್ನೇನೆ ಹೇಳಿದ್ದೇನೆ. ಕಾಯಿ ಬೆಳೆದು ಒಣಗತಾ ಇದೆ. ಗಿಡ ಸೋಸಬೇಕು ಅಂತಾ. ಇವತ್ತಾದ್ರು ಬರತಾನಾ ನೋಡಬೇಕು' ಅಂದವ ಅಂಗಳಕ್ಕೆ ಇಳಿದುಹೋಗಿ ಹೆಡೆಯನ್ನು ಹಿಂದಿನ ಹಿತ್ತಲಿಗೆ ಹಾಕಿ ಬಂದ. ಮನೆಯ ಸುತ್ತ ನಾಲಕೆಕರೆಯಷ್ಟು ಸುತ್ತುವರಿದ ಜಾಗವೆ ಇದೆ. ತೆಂಗು, ಹಲಸು, ಮಾವು ಎಲ್ಲಾ ಇವೆ. ಆದರೆ ಕಾಲಕಾಲಕ್ಕೆ ಹುಲ್ಲು ಸವರಿಸೋದು, ಮಾವಿಗೆ ಬದನಿಕೆ ಹತ್ತಿದೆಯ ನೋಡೋದು, ತೆಂಗಿನ ಕಾಯಿಯನ್ನು ಕೆಡವಿಸೋದು ಮಾಡದಿದ್ರೆ ಪ್ರಯೋಜನವಿಲ್ಲ.

ದೇವಣ್ಣ ಟ್ರೇ ಹಿಡಿದು ಬಂದ. ದೇಶ್ವಂತರಿಗೆ ಹತ್ತು ಗಂಟೆಯ ಹೊತ್ತಿಗೆ ಶುಂಠಿ, ಕೊತ್ತಂಬರಿ ಕಷಾಯ ಕುಡಿದು ರೂಢಿ. ಹಿರಿಯರಿಗೆ ಕೊಟ್ಟು, ಒಳಗಿದೆ ನೀವೂ ಕುಡಿತೀರ ಅಂತ ಇವರನ್ನ ವಿಚಾರಿಸಿದ. ರುಚಿಯಾಗಿರ್ತದೆ ಕೊಡು ಅಂದರು ಇಬ್ಬರೂ. ಬೆಲ್ಲದ ಸಿಹಿ ಸಂಗಡ ಕಾಳುಮೆಣಸಿನ ಖಾರವನ್ನು ಗಂಟಲಲ್ಲಿ ಅನುಭವಿಸುತ್ತಾ ಸವಿಯುತ್ತಿದ್ದಂತೆ ಗೇಟಿನ ಹತ್ತಿರ ಯಾವುದೋ ವಾಹನ ಬಂದು ನಿಂತ ಸದ್ದಾಯ್ತು. ಅತ್ತಿತ್ತ ಬೇಕಾದಷ್ಟು ಜಾಗವಿದ್ದುದಕ್ಕೆ ಯಾರೂ ತಮ್ಮ ಗೇಟಿನ ಹತ್ತಿರ ವಾಹನ ನಿಲ್ಲಿಸೋದಿಲ್ಲ. ಇಲ್ಲಿಗೆ ಬರುವವರಾದರೆ ಚಿಕ್ಕ ಗೇಟಿಂದ ಇನ್ನೆರಡು ಕ್ಷಣದಲ್ಲಿ ಬರತಾರೆ ಬಿಡು, ಅಂತ ಯಾರೂ ಏಳದೆ ಕಷಾಯ ಸವಿಯುತ್ತ ಕುಳಿತರು.

***

ದೊಡ್ಡ ಕಬ್ಬಿಣದ ಗೇಟಿನ ಪಕ್ಕ ಕಾರನ್ನು ನಿಲ್ಲಿಸಿ, ಇಳಿದು ಪಕ್ಕದ ಚಿಕ್ಕಗೇಟಿಗೆ ಬಂದ ನಾಯ್ಡು ಬೆಕ್ಕಸ ಬೆರಗಾದ. ಕಾಂಪೌಂಡೇ ಹೆಚ್ಚುಕಮ್ಮಿ ಹತ್ತೆಕರೆಯಷ್ಟಿರಬಹುದು! ಮರಗಿಡಗಳಿಂದ ಸುತ್ತುವರಿದ ಮನೆಯ ಎದುರುಭಾಗ ಮೂವತ್ತಡಿ ತೆರವಾಗಿದೆ. ನಾಯಿಯಿರಬಹುದಾದ ನೆನಪೂ ಬರದೆ ಗೇಟು ತೆರೆದುಕೊಂಡು ಪ್ರವೇಶಿಸಿ ಮನೆಯೆದುರು ಬಂದವ ನೋಡುತ್ತ ನಿಂತುಬಿಟ್ಟ. ಮನೆಯೆನ್ನಲಾಗದು; ಹಿಂದೀ ಸಿನಿಮಾಗಳಲ್ಲಿ ಹವೇಲಿ ಅಂತಾರಲ್ಲ; ಅದೇ ಇದು. ಮನೆಯೇ ಸುಮಾರು ಒಂದೆಕರೆಯಷ್ಟು ಇದ್ದಾಗಿದೆ. ಆಧುನಿಕ ಕಟ್ಟಡಗಳ ವಿಕಾರವೆಲ್ಲೂ ಇಲ್ಲ. ಎರಡಂತಸ್ತಿನ ಕಟ್ಟಡದ ಎದುರು ಮುಖಮಂಟಪ. ಎಡಕ್ಕು ಬಲಕ್ಕು ವಿಸ್ತರಿಸಿದ ಮೂರಡಿ ಎತ್ತರದ ಜಗುಲಿ. ಅದರ ಮೇಲೆ ಆರಡಿಗೊಂದರಂತೆ ನಿಂತ ಮಜಬೂತಾದ ದಪ್ಪನೆ ಮರದ ಕಂಬಗಳು. ಕಂಬದಿಂದ ಕಂಬವನ್ನ ಸಂಧಿಸುವಂತೆ ನಿರ್ಮಿಸಿದ ಮರದ ಕಡಕಟ್ಟು. ಮಾಡುಗಳನ್ನು ಆಧರಿಸಿ ಹಿಡಿದ ಮಜಬೂತಾದ ಮರದ ಜಂತಿಗಳು. ಎಲ್ಲಕ್ಕು ಮಿಗಿಲಾಗಿ ಅವನನ್ನು ಸೆಳೆದದ್ದೆಂದರೆ ಈಗ ಅಪರೂಪಕ್ಕು ಕಾಣಸಿಗದ ಕಪ್ಪು ನಾಡಹಂಚುಗಳು. ಕೆಂಪು ಹಂಚು ಒಂದೂ ಇರಲಿಲ್ಲ. ಅಂಗಾತನೆ ಇಡುವ ಎರಡು ಹಂಚುಗಳನ್ನು ಆವರಿಸಿ ಬಂಧಿಸುವಂತೆ ಕವುಚಿಡುವ ಒಂದು ಹಂಚು. ಇಳಿಜಾರಾಗಿ ರಚಿಸಿದ ಮಾಡಿಡೀ ಅದೇ. ಕಲ್ಪನೆಗೂ ನಿಲುಕದ್ದೊಂದು ಸಾಕಾರಗೊಂಡು ಎದುರು ನಿಂತಿತ್ತು. ತನ್ನ ಬೇಡಿಕೆಗೆ ಒಪ್ಪುತ್ತಾರೋ, ಇದರ ಮಾಲೀಕರ ಅಂತಸ್ತು ಎಂತದ್ದೋ — ಒಂದೂ ಆಲೋಚನೆ ಬರದಷ್ಟು ಆಕರ್ಷಿತನಾಗಿ ಮನೆಯನ್ನೇ ನೋಡುತ್ತ ನಿಂತುಬಿಟ್ಟ.

3

ಖಾಲಿ ಲೋಟಗಳನ್ನು ಎತ್ತಿಕೊಳ್ಳುತ್ತಿದ್ದ ದೇವಣ್ಣನಿಗೆ ಅಂಗಳದಲ್ಲಿ ಯಾರೋ ಇರುವಂತೆನಿಸಿ ಬಾಗಿಲಿಂದ ಮುಖಮಂಟಪಕ್ಕೆ ಬಂದ. ಪ್ಯಾಂಟು ಅರ್ಧತೋಳಿನ ಶರ್ಟು ಧರಿಸಿದ ದಪ್ಪನೆಯ ಆಸಾಮಿಯೊಬ್ಬ ಅಂಗಳದಲ್ಲಿ ನಿಂತು ಮನೆಯನ್ನು ನೋಡುವುದರಲ್ಲಿ ತಲ್ಲೀನನಾಗಿದ್ದ. ಒಳಗೆಬಂದು ಗೇಟಿನ ಹತ್ತಿರವೆ ನಿಂತಿದ್ದ ಇನ್ನೂ ಮೂವರು ಕಂಡರು. ಇಬ್ಬರು ಹೆಂಗಸರು.

'ಎಲ್ಲಾಯ್ತು ನಿಮಗೆ? ಯಾರು ಬೇಕಿತ್ತು?' ಅಂಗಳಕ್ಕಿಳಿಯುತ್ತಾ ದೇವಣ್ಣ ಕೇಳಿದ. ನಾಯ್ಡು ಈ ಲೋಕಕ್ಕೆ ಬಂದು '...ನಾನಿರೋದು ಬೆಂಗಳೂರು. ಸದ್ಯ ಶಿರಸಿಯಿಂದ ಬಂದೆ. ಯಜಮಾನರನ್ನ ಕಾಣಬೇಕಿತ್ತಲ್ಲ' ಅಂದ. ಗೇಟು ಹತ್ತಿರ ನಿಂತ ಕಾರೂ ಕಾಣಿಸಿ ದೇವಣ್ಣ 'ಬನ್ನಿ, ಯಜಮಾನ್ರು ಇದ್ದಾರೆ ಬನ್ನಿ' ಅಂದವ ಒಳಗೆ ಬಂದು ದೇಶ್ವಂತರಿಗೆ ಅವರು ಹೇಳಿದ್ದನ್ನು ಹೇಳಿದ.

ಎರಡು ನಿಮಿಷದ ನಂತರ ಮುಖಮಂಟಪ ಪ್ರವೇಶಿಸಿ ಬಾಗಿಲಿಂದ ಒಳಗೆ ಬಂದ, ಇಬ್ಬರು ಹೆಂಗಸರೂ ಇದ್ದ, ಅತಿಥಿಗಳನ್ನು ನೋಡಿದ ದೇಶ್ವಂತರಿಗೆ, ಎಷ್ಟು ಜ್ಞಾಪಿಸಿಕೊಂಡರೂ ತಮ್ಮ ಒಡನಾಟದಲ್ಲಿದ್ದ ಪೈಕಿ ಯಾರಿರಬಹುದು ಅಂತ ಪತ್ತೆ ಮಾಡಲಾಗಲಿಲ್ಲ. ಕುಳಿತುಕೊಳ್ಳುವಂತೆ ಸೋಫಾ ಕಡೆ ಕೈ ತೋರಿಸಿ ಅವರು ಕುಳಿತ ಮೇಲೆ 'ಕ್ಷಮಿಸಿ, ನಂಗೆ ಗುರ್ತು ಸಿಗಲಿಲ್ಲ...' ಅಂದರು. ಆರಡಿ ಎತ್ತರವಿರಬಹುದಾದ ಸಪೂರ ಮೈಕಟ್ಟಿನ ವ್ಯಕ್ತಿ, ಮೊಳಕಾಲಿಂದ ಸ್ವಲ್ಪ ಕೆಳಗೆ ಬರುವಂತೆ ಉಟ್ಟ ಬೆಳ್ಳನೆಯ ಕಚ್ಚೆಪಂಚೆ. ಅಷ್ಟೇ ಬೆಳ್ಳನೆ ಅರ್ಧತೋಳಿನ ಶರಟು. ವಯಸ್ಸಾದದ್ದು ಮುಖದಲ್ಲಿ ಧಾರಾಳವಾಗಿದ್ದ ನೆರಿಗೆಗಳು ತೋರಿಸಿದರೂ ಬಿಳಿಗೆಂಪು ಬಣ್ಣವನ್ನು ಮರೆಮಾಚಲಾಗುತ್ತಿರಲಿಲ್ಲ. ಎಲ್ಲಕ್ಕು ಮಿಗಿಲಾಗಿ ತಕ್ಷಣ ಗೌರವ ಕೊಡಬೇಕೆನಿಸುವ ಅವರ ಮುಖದ ಮೇಲಿನ ವರ್ಚಸ್ಸು. ನಾಯ್ಡು ಎದ್ದು ಕೈ ಜೋಡಿಸಿ ದೇಶ್ವಂತರಿಗೆ ನಮಸ್ಕರಿಸಿದ.

'ಇಲ್ಲ, ನಾವು ಮೊದಲ ಸಾರಿ ಭೇಟಿಯಾಗುತಿರೋದು. ಒಂದು ಅತ್ಯವಶ್ಯ ಕೆಲಸ ತಮ್ಮಿಂದಾಗ್ಬೇಕಿತ್ತು. ಅದಕ್ಕೇ ಬಂದೆವು.'

ದೇವಣ್ಣ ಎಲ್ಲರಿಗೂ ಗ್ಲಾಸುಗಳಲ್ಲಿ ನೀರು ತಂದ. 'ನೀರು ತಗೋಳಿ. ನಿಮಗೆಲ್ಲ ಚಹಾ ಆಗಬಹುದ ಅಥವಾ ಕಾಫಿನಾ?' ದೇಶ್ವಂತರು ಕೇಳಿದ್ದಕ್ಕೆ ಈಗೇನೂ ಬೇಡ ಅಂದರು ಎಲ್ಲ. 'ಅದು ನೀವು ಹೇಳೋದೇ. ನಮ್ಮ ಪದ್ಧತಿ ನಾವು ನಡೆಸುತೇವೆ' ಅಂದ ದೇಶ್ವಂತರು ಎಲ್ಲರಿಗೂ ಚಹಾ ಮತ್ತು ಅವಲಕ್ಕಿ ತರಲು ಹೇಳಿದರು.

'ಬೆಂಗಳೂರಲ್ಲಿ ಏನು ಮಾಡ್ಕೊಂಡಿದೀರಿ?' ಕೇಳಿದರು ಲೋಕಾಭಿರಾಮವಾಗಿ.

'ನಮ್ಮದು ಎರಡು ಮೂರು ತರಾ ಬಿಸಿನೆಸ್ಸು. ಚಿತ್ರೋದ್ಯಮದಲ್ಲಿ ಸದ್ಯ ಅಷ್ಟು ತೊಡಗಿಕೊಂಡಿದೀನಿ' ಸೌಜನ್ಯದ ಮುಗುಳ್ನಗುತ್ತಾ ಅಂದ. ಅಷ್ಟರಲ್ಲಿ ಖಾರ ಹಚ್ಚಿದ ಅವಲಕ್ಕಿ, ಚಹಾ ತಂದ ದೇವಣ್ಣ. 'ನಿಧಾನವಾಗಿ ತಿನ್ನಿ. ಈಗ ಬಂದೆ' ಎಂದು ದೇಶ್ವಂತರು ಎದ್ದು ಒಳಹೋದರು. ಎರಡು ನಿಮಿಷ ತರುವಾಯ ಹೊರಬಂದವರ ಸಂಗಡ ವಯಸ್ಸಾದ ಮಹಿಳೆಯಿದ್ದರು. 'ಇವಳು ನನ್ನ ಹೆಂಡತಿ ಬಕುಲಾ. ಇವರಿಬ್ಬರು ನನ್ನ ಮಕ್ಕಳು. ಈತ ಮೊಮ್ಮಗ' ಅಂತ ಪರಿಚಯಿಸಿದರು. ಎದ್ದುನಿಂತು 'ನಾನು ಸಂತೋಷ ನಾಯ್ಡು ಅಂತ. ಇವರು ಗೋಪಾಲ ರಾವ್, ಬರಹಗಾರರು. ಇವರು ಚಂದನಿಕಾ, ಇವರು ಕಮಲಮ್ಮ, ಚಂದನಿಕಾ ಇವರ ಮಗಳು' ಬಕುಲಾ ಕಡೆ ನೋಡಿ ಕೈಜೋಡಿಸಿದ. ಸೀರೆಯುಟ್ಟ ಬಕುಲಾ ಗಂಡನ ಎದೆಯವರೆಗೆ ಬರುವಂತಿದ್ದರು. ಗೌರವರ್ಣ. ಸ್ವಲ್ಪ ಸ್ಥೂಲಕಾಯವಾಗಿದ್ದಕ್ಕೇನೊ ಚರ್ಮದ ಮೇಲೆ ಗಂಡನಷ್ಟು ನೆರಿಗೆ ಕಾಣುತ್ತಿಲ್ಲ. ವಿಶೇಷ ದಿನದಲ್ಲಿ ಮಹಾರಾಷ್ಟ್ರ ಕಡೆಯ ಮಹಿಳೆ ಮಾಡುವಂತೆ ಹಣೆಗೆ ಅರ್ಧ ಚಂದ್ರಾಕಾರದಲ್ಲಿ ಸಿಂಧೂರವಿತ್ತು, ಕಚ್ಚೆಹಾಕಿ ಸೀರೆಯುಟ್ಟಿದ್ದರು. ಆದರ ಹುಟ್ಟಿಸುವ ವ್ಯಕ್ತಿತ್ವ. ಉಪಾಹಾರ ಮುಗಿಯಿತು. 'ಬರ್‍ರಿ, ನಾವು ಮಾತಾಡೋಣ' ದೇಶ್ವಂತರು ಹಾಲಿನ ಬಲಮೂಲೆಯಲ್ಲಿ ಬೇರೆಯಾಗಿ ಹಾಕಿದ್ದ ಮೇಜು, ಕುರ್ಚಿಗಳತ್ತ ಹೆಜ್ಜೆ ಹಾಕಿದರು. ನಾಯ್ಡು ಮತ್ತೆ ಗೋಪಾಲ ರಾವ್ ಹಿಂಬಾಲಿಸಿದರು. ಮಹಿಳೆಯರ ಸಂಗಡ ಮೊದಲಿದ್ದ ಜಾಗದಲ್ಲಿ ಬಕುಲಾಬಾಯಿ ಮಾತಾಡುತ್ತ ಕುಳಿತರು. 'ಈಗ ಹೇಳ್ರಿ' ಅಂದರು.

ಒಂದು ಕ್ಷಣ ಯೋಚಿಸಿ, 'ನಾನು ತೆಲುಗಿನಲ್ಲಿ ಮೂರು ಸಿನಿಮಾ ಮಾಡಿದೀನಿ. ಜನ ಮೆಚ್ಚಿಕೊಂಡಿದಾರೆ. ಕನ್ನಡದಲ್ಲಿ ಸಿನಿಮಾ ಮಾಡಿಕೊಡಿ ಅಂತಾ ಮೂರು ನಾಕು ಜನ ಪ್ರೊಡ್ಯೂಸರುಗಳು ಒತ್ತಾಯಿಸ್ತಿದಾರೆ'.

ದೇಶ್ವಂತರಿಗೆ, ಈ ಬೃಹದಾಕಾರದ ಮನೆ